ಏನೋ, ವಿಧಿ ಅವನಿಗೆ ಕೈಕೊಟ್ಟುಬಿಟ್ಟಿತ್ತು.

ನಲವತ್ತು ತುಂಬಿದರೂ ಮದುವೆಯಾಗದ ಅವನು ಒಮ್ಮೆ ಎಣೆಯಾಡುತ್ತಿರುವ ನಾಗರ ಜೋಡಿಯನ್ನು ನೋಡಿದ. ಅದು ಯಾಕೋ ಏನೋ ಅವನ ಸಿಟ್ಟು ನೆತ್ತಿಗೇರಿತು. ಅಲ್ಲಿಯೇ ರಸ್ತೆ ಬದಿಯಲ್ಲಿ ಒಂದು ಕಲ್ಲನ್ನು ತೆಗೆದುಕೊಂಡು ಮೈಮರೆತು ಸುಖಿಸುತ್ತಿದ್ದ ಹಾವುಗಳಿಗೆ ಹೊಡೆದ. ಆದರೆ, ಒಂದು ಓಡಿ ಹೋಯಿತು; ಪೆಟ್ಟು ತಿಂದ ಇನ್ನೊಂದು, ದೂಳಿನಲ್ಲಿ ಒದ್ದಾಡುತ್ತಾ, ವಿಲವಿಲನೆ ಚಕ್ರದಂತೆ ಸುತ್ತು ಹಾಕತೊಡಗಿತು. ಭುಜಂಗನಿಗೆ ಅದನ್ನು ನೋಡಲಾಗಲಿಲ್ಲ. ಮತ್ತೊಂದು ದೊಡ್ಡ ಕಲ್ಲನ್ನು ಎತ್ತಿ ಅದರ ಮೇಲೆ ಹಾಕಿ ಸಾಯಿಸಿಬಿಡಬೇಕು ಎನ್ನುವಷ್ಟರಲ್ಲಿ ಅವನ ಮನಸ್ಸು ಮತ್ತು ದೇಹಗಳ ಒಳಗೆ ವಿಚಿತ್ರ ವಿದ್ಯಮಾನವೊಂದು ನಡೆದುಬಿಟ್ಟಿತು. ಇದ್ದಕ್ಕಿದ್ದಂತೆ ಅವನ ಎರಡೂ ಭುಜಗಳು ಸೋತು ಸಡಿಲವಾಗಿಬಿಟ್ಟವು; ಸೊಂಟದ ಬಲವು ಕುಗ್ಗಿ, ಕಾಲುಗಳು ಬಸವಳಿದಂತಾಗಿ ನೋಡನೋಡುತ್ತಲೇ ಭುಜಂಗನು ನೆಲದಲ್ಲಿ ಕುಸಿದು, ದೂಳಿನಲ್ಲಿಯೇ ಅಂಗಾತ ಮಲಗಿಬಿಟ್ಟ!

ಐದಾರು ತಿಂಗಳು ಲಕ್ವ ಹೊಡೆದವನಂತೆ ಇದ್ದ ಭುಜಂಗ, ಕ್ರಮೇಣ ಚೇತರಿಸಿಕೊಂಡಿದ್ದ. ಮತ್ತೆ ಒಂದೆರಡು ವರ್ಷಗಳಲ್ಲಿ ಸರೋಜಮ್ಮ ಹೇಗೋ ಏನೊ ತಾಟಗಿತ್ತಿಯೊಬ್ಬಳನ್ನು ತಂದು ತನ್ನ ಮಗನಿಗೆ ಕಟ್ಟಿಯೇಬಿಟ್ಟಳು! ಅಂದಿನಿಂದ ಇಂದಿನವರೆಗೂ ಅವಳನ್ನು ಎಲ್ಲರೂ ಗುರುತಿಸುವುದು ಸರೋಜಮ್ಮನ ಸೊಸೆಯೆಂದೇ. ಅವಳಾದರೋ ಅತ್ತೆಗೆ ತಕ್ಕ ಸೊಸೆಯಾಗಿದ್ದಳು; ಒಬ್ಬಳು ಸೇರು ಇನ್ನೊಬ್ಬಳು ಸವ್ವಾಸೇರು!

ಭುಜಂಗನ ಮನೆಯಲ್ಲಿ ಗಂಡಸು ಎಂದರೆ, ಸರೋಜಮ್ಮನ ಸೊಸೆ ಎಂಬುದು ಎಲ್ಲರಿಗೂ ತಿಳಿದ ಮಾತಾಗಿತ್ತು. ಅವರದ್ದು ಬರೀ ಎರಡು ಎಕರೆ ಗದ್ದೆಯಷ್ಟೆ. ಅದರಲ್ಲಿ ಹೂಟಿ ಮಾಡುತ್ತಿದ್ದವಳು ಸರೋಜಮ್ಮನ ಸೊಸೆಯೇ ಹೊರತು ಮಗ ಭುಜಂಗನಲ್ಲ. ದೊಡ್ಡ ಬೈನೆ ಮರದ ಕೊರಡನ್ನು ಎತ್ತುಗಳಿಗೆ ಕಟ್ಟಿ, ಅದರ ಮೇಲೆ ತಾನೂ ಹತ್ತಿ ನಿಂತು, 'ಹೆ!ಹೆ!' ಅಂದರೆ ಸಾಕು, ಎತ್ತುಗಳು ಬಾಲವೆತ್ತಿ ಸಟಸಟನೆ ಹೆಜ್ಜೆಹಾಕುತ್ತವೆ. ಹೂಟಿ ಮಾಡಿದಾಗ ಮೇಲಕ್ಕೆದ್ದ ಮಣ್ಣಿನ ಹೆಂಡೆಗಳೆಲ್ಲಾ ಕೊರಡಿನ ಕೆಳಗೆ ಸಿಕ್ಕು ಹುಡಿಯಾಗಿ ಬಿಡುತ್ತವೆ. ಗಂಡಸರು ಹತ್ತಲು ಹೆದರುತ್ತಿದ್ದ ಅವರ ಮನೆಯ ಮುಂದಿನ ತೆಂಗಿನ ಮರವನ್ನು ಇವಳೇ ಹತ್ತಿ ಕಾಯಿಗಳನ್ನು ಕೀಳುತ್ತಿದ್ದಳು. ಎಲ್ಲೆಲ್ಲಿಂದಲೋ ಉಂಡೆ ಕಲ್ಲುಗಳನ್ನು ಹೊತ್ತು ತಂದು, ಗದ್ದೆ ಬದಿಯ ಹೊಳೆಗೆ ಅಡ್ಡಲಾಗಿ ಕಟ್ಟಿ, ಭತ್ತದ ಸಸಿಗೆ ನೀರು ಹಾಯಿಸುತ್ತಿದ್ದಳು. ದೊಡ್ಡ ಮರದ ಕುಂಟೆಯನ್ನು ಅಡ್ಡ ಮಲಗಿಸಿ, 'ಉಸ್!ಉಸ್!' ಎನ್ನುತ್ತಾ, ಕೊಡಲಿಯನ್ನೆತ್ತಿ ಬಚ್ಚಲು ಒಲೆಗೆ ಕಟ್ಟಿಗೆ ಮಾಡುತ್ತಿದ್ದಳು. ಅವಳು ಇಂತಹ ಕೆಲಸಗಳನ್ನು ಮಾಡುತ್ತಿದ್ದರೆ, ಗಂಡಸರು ಬಾಯಿಗೆ ಬೆರಳಿಟ್ಟು ನೋಡಲೂ ಹಿಂಜರಿಯುತ್ತಿದ್ದರು; ಏಕೆಂದರೆ, ಒಳಗಿನಿಂದ ಅವಳ ಅತ್ತೆ ಸರೋಜಮ್ಮ, 'ಅದೇನು ಕುಣೀತದೆ ಅಂತ ಅವಳನ್ನ ನೋಡೋದು; ತಾಕತ್ತಿದ್ದರೆ ನೀವೂ ಬಂದು ಮಾಡಿ ನೋಡಾನ' ಎಂದು ಗದರಿಸುತ್ತಿದ್ದಳು. ಎಂತಹ ಗಂಡಸೂ ನಾಚಿ ಜಾಗ ಖಾಲಿಮಾಡಿಬಿಡುತ್ತಿದ್ದ.

ಮಧ್ಯಾಹ್ನದ ಬಿಸಿಲಿನ ಉರಿಯು ಕಳೆದು, ಸೂರ್ಯ ಪಶ್ಚಿಮದಲ್ಲಿ ಅಡ್ಡಾಗುತ್ತಲೇ, ಹಿತ್ತಲಿನಲ್ಲಿ ಬಿರಿಯುತ್ತಿದ್ದ ಮಲ್ಲಿಗೆ ಮೊಗ್ಗುಗಳನ್ನು ಕೊಯ್ದು ತಂದು, ಹೊರಗೆ ಚಿಟ್ಟೆ ಬದಿಗೆ ಉದ್ದುದ್ದಕ್ಕೆ ಕಾಲು ಚಾಚಿಕೊಂಡು ಹೆಬ್ಬೆರಳಿನ ತುದಿಗೆ ಬಾಳೆ ಪಟ್ಟೆಯ ಸಣ್ಣ ದಾರವನ್ನು ಸುತ್ತಿಕೊಂಡು ಹೂವು ನೇಯುತ್ತಾ, ಹಾಡೊಂದನ್ನು ಗುನುಗುವ ಹೆಂಗಸೂ ಸರೋಜಮ್ಮನ ಸೊಸೆಯೇ!